ಬ್ರಾಹ್ಮಣವಿರೋಧಿಯೆಂದೇ ತಪ್ಪಾಗಿ ಗ್ರಹಿಸಿದ್ದಾರೆಂದು ಹೇಳಿದ ಕುವೆಂಪು ಅವರು, ಮೇಲ್‌ಜಾತಿ ಅಥವಾ ವರ್ಗದವರಿಗೆ ಮಾತ್ರವಲ್ಲ, ಶೂದ್ರಾತಿಶೂದ್ರರಿಗೂ ತಪಸ್ಸಿನ ಹಕ್ಕು ಮತ್ತು ಶಕ್ತಿಯಿದೆಯೆನ್ನುವುದು 'ಶೂದ್ರತಪಸ್ವಿ'ಯ ಆಶಯವೆಂದು ನಂಬಿರುವುದು 'ಮಾನಸಿಕ ದೂರದಿಂದ' ಕೃತಿ ಪ್ರವೇಶ ಮಾಡಿದಾಗ ಸ್ಪಷ್ಟವಾಗುತ್ತದೆ. ಒಟ್ಟಾರೆ ಅಧ್ಯಾತ್ಮದ ಹಕ್ಕಿನ ಪ್ರತಿಪಾದನೆಗಾಗಿ ಇಲ್ಲಿ ಜಾತಿ-ವರ್ಣಗಳ ವಾಸ್ತವವನ್ನು ನಿರೂಪಿಸಲಾಗಿದೆ. ದ್ವೇಷಕ್ಕಾಗಿ ಅಲ್ಲ; ದ್ವೇಷ ಮಾಡುವುದೂ ಸಲ್ಲ.

ಕುವೆಂಪು ಅವರ ಅಭಿಪ್ರಾಯದಲ್ಲಿ 'ಭಾರತೀಯ ಸಂಸ್ಕೃತಿಯು ಬರಿಯ ವೈದಿಕವಲ್ಲ, ಅವೈದಿಕವೂ ಅದರ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದೆ'- ಇದೊಂದು ಮುಖ್ಯಮಾತು.

ಧರ್ಮಶಾಸ್ತ್ರ, ಮನುಸ್ಮೃತಿ ಮೊದಲಾದವು ಏನೇ ಹೇಳಲಿ, ಎಲ್ಲವನ್ನೂ ವಿಮರ್ಶಿಸುವ, ಪರೀಕ್ಷಿಸುವ, ಒರೆಗಲ್ಲಿಗೆ ಹಚ್ಚುವ ಹಕ್ಕು ನಮ್ಮದಾಗಿರುತ್ತದೆಯೆಂಬ ಕುವೆಂಪು ವಿಚಾರಧಾರೆಯನ್ನು ಈ ಚರ್ಚೆಗೆ ಪೂರಕವಾಗಿ ನೋಡಬಹುದು. ಮತಧರ್ಮಗಳನ್ನು ಕುರಿತ ಅವರ ದೃಷ್ಟಿಕೋನವೂ ಸ್ಪಷ್ಟವಾಗಿದೆ: 'ಮೊದಲೇ ಹೊಲಿಸಿಟ್ಟಿರುವ ಅಂಗಿಗಳಂತಿವೆ ಈ ಮತಗಳು. ಬಿಗಿಯೋ ಸಡಿಲವೋ ಬೇಕೋ ಬೇಡವೋ ಅವುಗಳನ್ನು ಹಾಕಿಕೊಳ್ಳಬೇಕಾಗಿದೆ' ಎಂದು ಹೇಳುವ ಕುವೆಂಪು, ನಮಗೆ ಬೇಕಾದ ಅಂಗಿಗಳನ್ನು ಹೊಲೆಸಿಕೊಳ್ಳುವ ಸ್ವಾತಂತ್ರ್ಯ ನಮಗಿರಬೇಕು ಎಂದು ಪ್ರತಿಪಾದಿಸಿದ್ದಾರೆ. ಈ ರೂಪಾತ್ಮಕ ಚಿಂತನೆಯು ಸಾಂಸ್ಥಿಕ ಹಾಗೂ ಜಡಗೊಂಡ ಮತಧರ್ಮಗಳ ಮೂಲಭೂತವಾದಿ ಲಕ್ಷಣವನ್ನು ನಿರಾಕರಿಸಿ, ವ್ಯಕ್ತಿ ಸ್ವಾತಂತ್ರ್ಯ, ಸಮುದಾಯ ಸ್ವಾತಂತ್ರ್ಯ ಮತ್ತು ಧಾರ್ಮಿಕ ಸ್ವಾತಂತ್ರ್ಯವನ್ನು ಪ್ರತಿಪಾದಿಸುತ್ತದೆ.

ಕುವೆಂಪು ಅವರು ದೈವವನ್ನು ಕಾಣುವುದು ನಿಸರ್ಗದಲ್ಲಿ ಎನ್ನುವುದು ಅವರ ಕವಿತೆಗಳಲ್ಲಿ ಕಂಡುಕೊಂಡ ದೃಷ್ಟಿಕೋನ. ನಿಸರ್ಗವೆಂದರೆ ಒಂದು ಮರ, ಒಂದು ಗಿಡ, ಒಂದು ಬಳ್ಳಿ, ಒಂದು ಹೂವು, ಅಲ್ಲ. ಅದೊಂದು ಬಹುರೂಪಿ ಒಕ್ಕೂಟ. ಅಲ್ಲಿ ದೈವವೆನ್ನುವುದು ನಿರಾಕಾರ. ನಿಸರ್ಗವೆಲ್ಲವೂ ದೈವ. ಅಂತೆಯೇ ಕುವೆಂಪು ದೃಷ್ಟಿಯಲ್ಲಿ 'ಸೂರ್ಯೋದಯ ಚಂದ್ರೋದಯ ದೇವರ ದಯೆ'. ಹೀಗೆ ಬಹುತ್ವ ಒಕ್ಕೂಟರೂಪಿಯಾದ ನಿಸರ್ಗದಲ್ಲಿ ದೈವವನ್ನು ಕಾಣುವ ಕುವೆಂಪು 'ಜಲಗಾರ' ನಾಟಕದಲ್ಲಿ ಇನ್ನೊಂದು ನೆಲೆಗೆ ಕೊಂಡೊಯ್ಯುತ್ತಾರೆ. ಈ ನಾಟಕದ ಶಿವ ಹೇಳುವುದು ಹೀಗೆ: 'ಬೀದಿ ಗುಡಿಸುವ ಬಡವನೆದೆಯಲ್ಲಿ ನಾನಿರುವೆ| ಉಳುತಿರುವ ಒಕ್ಕಲಿಗನೆದೆಯಲ್ಲಿ ನಾನಿರುವೆ'. ಆಗ ಜಲಗಾರ 'ನನ್ನೆದೆಯ ದೇಗುಲ' ಎನ್ನುತ್ತಾರೆ.

ಕುವೆಂಪು ತಮ್ಮದೊಂದು ಕವನದಲ್ಲಿ 'ಯಾವ ಕಾಲದ ಶಾಸ್ತ್ರವೇನು ಹೇಳಿದರೇನು? ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?' ಎಂದು ಪ್ರಶ್ನಿಸುತ್ತಲೇ ಉತ್ತರಿಸಿದ್ದಾರೆ. ಅಂದರೆ, ದೈವ ಇರುವುದು 'ಬಡವನೆದೆಯಲ್ಲಿ', 'ಒಕ್ಕಲಿಗನೆದೆಯಲ್ಲಿ', 'ಜಲಗಾರನ ಎದೆಯಲ್ಲಿ'; ಅಂತೆಯೇ ಎದೆಯ ದನಿಗಿಂತ ಬೇರೆ ಶಾಸ್ತ್ರವಿಲ್ಲ ಅಂದರೆ ದೈವವನ್ನು ಮನುಷ್ಯರ ಎದೆಯಲ್ಲಿ ಅರ್ಥಾತ್ ಹೃದಯದಲ್ಲಿ ಕಾಣುವುದು ಕುವೆಂಪು ದರ್ಶನದ ವಿಶಿಷ್ಟತೆ. ಜೀವಶಾಸ್ತ್ರದ ಹೃದಯಕ್ಕೆ ಆಕಾರವಿರುತ್ತದೆ. ಆದರೆ ಸಾಹಿತ್ಯ-ಸಂಸ್ಕೃತಿಗಳು ಪರಿಭಾವಿಸುವ ಹೃದಯಕ್ಕೆ ಆಕಾರವಿಲ್ಲ, ಅದು ನಿರಾಕಾರ. ಈ ವಿಶ್ಲೇಷಣೆಯ ಸಂದರ್ಭದಲ್ಲಿ ಬಸವಣ್ಣನವರ 'ದೇಹವೇ ದೇಗುಲ'ವೆಂಬ ಪರಿಕಲ್ಪನೆಯನ್ನು ನೆನೆಯಬಹುದು. ದೇಹವನ್ನು ಸಾಮಾನ್ಯವಾಗಿ ಕಾಮನೆ, ಪ್ರಲೋಭನೆಗಳ ರೂಪಕವಾಗಿ ನೋಡಲಾಗುತ್ತದೆ. ಆದರೆ ಬಸವಣ್ಣನವರು 'ದೇಹವೇ ದೇಗುಲ' ಎನ್ನುವ ಮೂಲಕ ದೇಹಕ್ಕೆ ನೈತಿಕ ನಿಷ್ಠೆಯ ಶಕ್ತಿಯನ್ನು ತಂದುಕೊಡುತ್ತಾರೆ. ಕಾಮನೆ, ಪ್ರಲೋಭನೆಗಳಿಗೆ ಬದಲು ದೇಗುಲದ ಸ್ಥಾನ ನೀಡುತ್ತಾರೆ. ದೇವಾಲಯವನ್ನು ದೇಹಕ್ಕೆ ಸ್ಥಳಾಂತರಿಸುತ್ತಾರೆ. ಹೀಗೆ ದೇಗುಲವನ್ನು ದೇಹಕ್ಕೆ ಸ್ಥಳಾಂತರಿಸಿದ ಬಸವಣ್ಣನವರ ಪರಿಕಲ್ಪಯು ಒಂದು ಕ್ರಾಂತಿಕಾರಿ ಚಿಂತನೆ. ಕುವೆಂಪು ಅವರು ಬಸವಣ್ಣನವರ ಈ ಕ್ರಾಂತಿಕಾರಿ ಚಿಂತನೆಯನ್ನು 'ಈ ದೇಹ ದೇವರ ಗುಡಿ' ಎನ್ನುವ ಮೂಲಕ ಒಪ್ಪಿ, ಆನಂತರ ವಿಸ್ತರಿಸಿ, ದೈವವನ್ನು ದೇಹವೆಂಬ ದೇಗುಲದ ಹೃದಯಕ್ಕೆ ಸ್ಥಳಾಂತರಿಸಿದ್ದಾರೆ. 'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಎಂಬ ವಿಚಾರಧಾರೆಯ ಮೂಲಕ ಬಸವಣ್ಣನವರು ಜಂಗಮ ದೇಹಕ್ಕೆ ದೇಗುಲವನ್ನು ಸ್ಥಳಾಂತರಿಸಿ ತಾರತಮ್ಯ ತಾಣವಾಗಿದ್ದ ದೇಗುಲಗಳನ್ನು